# ಪಟ್ಟಣ ಪಂಚಾಯಿತಿ ಕಾರ್ಯಲಯ ಸೊರಬ

## TOWN PANCHAYATH, SORAB-577429, SHIMOGA

ದೂರವಾಣಿ:08184-272232

ಫ್ಯಾಕ್ಸ್ ನಂ :08184-272305

ನಂ.ಪಪಂಸೊ.ಜೆಇ:ಟೆಂಡರ್ ಸಿಆರ್.06/2009-10 ದಿನಾಂಕ:27-11-2009

-: ಟೆಂಡರ್ ಪ್ರಕಟಣೆ:-

ಸೊರಬ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2008-09ನೇ ಸಾಲಿನ ವಿಶೇಶನಿಧಿ ಹಾಗೂ 2009-10ನೇ ಸಾಲಿನ (ಸಿ.ಎಂ.ಎಸ್.ಎಂ.ಟಿ.ಡಿ.ಪಿ)ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಸೊರಬ ಪಟ್ಟಣ ಪಂಚಾಯಿತಿಯ ಎದುರುಭಾಗದಲ್ಲಿ ಬರುವ ಹಳೇ ಸರ್ಕಾರಿ ಆಸ್ಪತ್ರೆ ಜಾಗದಲ್ಲಿ 1ನೇ ಹಂತದ ಖಾಸಗಿ ಬಸ್ ನಿಲ್ದಾಣ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ 1ನೇ ದರ್ಜೆ ಗುತ್ತಿಗೆ ಪರವಾನಿಗೆಯನ್ನು ಹೊಂದಿರುವ ಅರ್ಹ ಗುತ್ತಿಗೆದಾರರಿಂದ K.W-4, ಅನುಬಂಧ-IVರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ದ್ವಿಪ್ರತಿ ಲಕೋಟೆಯ ಟೆಂಡರನ್ನು ಅಹ್ವಾನಿಸಲಾಗಿದ್ದು,(ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ ಪ್ರತ್ಯೇಕ ಕವರಿನಲ್ಲಿ ಸಲ್ಲಿಸುವುದು) ಆಸಕ್ತಿವುಳ್ಳವರು ಟೆಂಡರ್ ಸಲ್ಲಿಸುವುದು. ಯಾವುದೆ ಕಾರಣ ನೀಡದೆ ಟೆಂಡರ್ ತಿರಸ್ಕರಿಸುವ ಹಕ್ಕು ಕಾಯ್ದಿರಿಸಲಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನಿಬಂಧನೆ ಮತ್ತು ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಕಾಮಗಾರಿ ವಿಭಾಗದಿಂದ ಪಡೆಯುವುದು ಅಥವಾ ಈ ಕಛೇರಿ ವೆಬ್‌ಸೈಟ್‌ನಲ್ಲಿ ನೋಡುವುದು. (http://www.sorabatown.gov.in)

1. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ನೀಡಲು ಕಡೆಯ ದಿನಾಂಕ:27-11-2009ರಿಂದ 02-01-2010ರ ಸಂಜೆ 4.30ಗಂಟೆಯವರೆಗೆ.
2. ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:05-01-2010 ಸಂಜೆ 4.30ಗಂಟೆವರೆಗೆ
3. ಟೆಂಡರ್ ತೆರೆಯಲು ಕಡೆಯ ದಿನಾಂಕ:05-01-2010 ಸಂಜೆ 5.00ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂ. (ಲಕ್ಷಗಳಲ್ಲಿ) | ಟೆಂಡರ್ ಫಾರಂ ಷೀ ರೂ. (ರೂಗಳಲ್ಲಿ) | ಗುತ್ತಿಗೆದಾರರ ದರ್ಜೆ | ಕಾಮಗಾರಿ ಪೂರ್ಣ ಗೊಳಿಸುವ ಕಾಲಾವಧಿ |
|---|---|---|---|---|---|---|
| 1. | ಸೊರಬ ಪಟ್ಟಣ ಪಂಚಾಯಿತಿಯ ಎದುರು ಭಾಗದಲ್ಲಿ ಬರುವ ಹಳೇ ಸರ್ಕಾರಿ ಆಸ್ಪತ್ರೆಜಾಗದಲ್ಲಿ ಖಾಸಗಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ (1ನೇ ಹಂತ) | 190.00 | **2.85** | 21375.00 | 1ನೇ ದರ್ಜೆ ಸಿವಿಲ್ | 12 ತಿಂಗಳು |

# :ಷರತ್ತುಗಳು:

1. ಅರ್ಜಿದಾರರು ಟೆಂಡರ್ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರಬೇಕು. ಸರ್ಕಾರಿ ಆದೇಶ ಸಂಖ್ಯೆ.ಪಿ.ಡಬ್ಲ್ಯೂ.ಡಿ 344 ಸಿ.ಆರ್.ಎಂ.2000 ದಿನಾಂಕ:15-01-2002ರ ಪ್ರಕಾರ ಈ ಕಾಮಗಾರಿಗಳಿಗೆ KW-4 ನಿರ್ದಿಷ್ಟಪಡಿಸಿದ ಮೊತ್ತದ ಸಮನಾದ ಒಂದೇ ಕಾಮಗಾರಿಯನ್ನು ಅರ್ಜಿದಾರರು ಹಿಂದಿನ ಐದು ಆರ್ಥಿಕ ವರ್ಷಗಳ ಬ್ಲಾಕ್ ಕಾಲಾವಧಿಯ ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ಪೂರೈಸಿರಬೇಕು. ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು.
2. ಕಾಮಗಾರಿಗಳಿಗೆ ಭಾಗವಹಿಸಿದ ಗುತ್ತಿಗೆದಾರರು ಕೆಲಸಕ್ಕೆ ಅವಶ್ಯಕವಾದ ಯಂತ್ರೋಪಕರಣಗಳನ್ನು Karnataka Standard Documents-4ರಲ್ಲಿ ಸೂಚಿಸಿರುವಂತೆ ಸಲ್ಲಿಸತಕ್ಕದ್ದು. ಎಲ್ಲಾ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ಹೊಂದಿರುವ ಬಗ್ಗೆ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಪತ್ರಗಳೊಂದಿಗೆ ಹಾಗೂ ಆದಾಯ ತೆರಿಗೆ, ವಾಣಿಜ್ಯ ತೆರಿಗೆ ಸಂದಾಯದ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು.
3. ಗುತ್ತಿಗೆದಾರರು ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೇ ಮಧ್ಯದಲ್ಲಿ ತೊರೆದಿರಬಾರದು. ಹಾಗೂ ಸಕಾರಣವಿಲ್ಲದೇ ಯಾವುದೇ ಕಾಮಗಾರಿಗಳನ್ನು ವಿಳಂಬವಾಗಿ ಪೂರೈಸಿರಬಾರದು.
4. ಅರ್ಜಿದಾರರು ತಮ್ಮ ಗುತ್ತಿಗೆ ನೊಂದಾವಣೆ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
5. ಗುತ್ತಿಗೆದಾರರು ಭಾಗವಹಿಸುವ ಕಾಮಗಾರಿಯ ಅಂದಾಜು ಮೊತ್ತದ ಶೇ.30ರಷ್ಟು ಮೌಲ್ಯಕ್ಕೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯುವ ಸಾಮರ್ಥ್ಯದ ಬಗ್ಗೆ (ಲೈನ್ ಆಫ್ ಕ್ರೆಡಿಟ್)ದೃಢೀಕರಣ ಪತ್ರ ಲಗತ್ತಿಸತಕ್ಕದ್ದು.
6. ಟೆಂಡರ್ ಫಾರಂಗಳನ್ನು ಈ ಕಛೇರಿಯಿಂದ ತೆಗೆದುಕೊಂಡು ಹೋಗುವಾಗ ತಮ್ಮ ರಿಜಿಸ್ಟೇಷನ್ ಪಾಸ್ ಬುಕ್‌ನ್ನು ಒದಗಿಸಿ ಕೆಲಸದ ವಿವರಗಳನ್ನು ದಾಖಲಿಸಿಕೊಳ್ಳತಕ್ಕದ್ದು.
7. ಕಾರ್ಯದೇಶ ಪಡೆಯುವ ಮುನ್ನ ಬಿಡ್ ಮೊತ್ತದ ಮೇಲೆ ಶೇ 5%ರಷ್ಟು ಎಫ್.ಎಸ್.ಡಿ ಹಣವನ್ನು ಡಿ.ಡಿ.ಮುಖಾಂತರ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಸಲ್ಲಿಸತಕ್ಕದ್ದು. (ಕರ್ನಾಟಕ ಟೆಂಡರ್ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW-4ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟಿರುತ್ತದೆ.)
8. ಟೆಂಡರ್ ಸಲ್ಲಿಸುವಾಗ ಅನುಸೂಚಿ ದರಕ್ಕಿಂತ ಕಡಿಮೆ ದರ ಸಲ್ಲಿಸಿದಲ್ಲಿ ವ್ಯತ್ಯಾಸ ಮೊಬಲಗನ್ನು ಡಿ.ಡಿ.ಯೊಂದಿಗೆ ಟೆಂಡರ್ ಜೊತೆಯಲ್ಲಿ ಲಗತ್ತಿಸತಕ್ಕದ್ದು, ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
9. ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಆದೇಶದನ್ವಯ ಪೂರ್ಣಗೊಂಡ ಕಾಮಗಾರಿಯ ದಿನಾಂಕದಿಂದ ಮುಂದುವರಿದಂತೆ ಕಾಮಗಾರಿಯ ನಿರ್ವಹಣೆಯನ್ನು 2ವರ್ಷದವರೆಗೆ ಗುತ್ತಿಗೆದಾರರು ಕಾಯ್ದುಕೊಳ್ಳುವ ಜವಾಬ್ದಾರಿ ಇರುತ್ತದೆ. ನಂತರ ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.
10. ಗುತ್ತಿಗೆದಾರರು ಮಾಡಿದ ಕಾಮಗಾರಿಯನ್ನು ಎಲ್ಲಾ ರೀತಿಯಿಂದ ಪೂರ್ಣಗೊಳಿಸಿ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಪರೀಕ್ಷಿಸಿದ ವರದಿ ಬಂದ ನಂತರ ಕಾಮಗಾರಿಯನ್ನು ಹಸ್ತಾಂತರಿಸಿ ಕೊಳ್ಳಲಾಗುವುದು.
11. ಸದರಿ ಕಾಮಗಾರಿಗಳು ಎರಡು ಲಕೋಟೆಗಳನ್ನು ಹೊಂದಿದ್ದು ಲಕೋಟೆ-ಎ ಟೆಕ್ನಿಕಲ್ ಬಿಡ್, ಲಕೋಟೆ-ಬಿ ಫೈನಾನ್ಸಿಯಲ್ ಬಿಡ್‌ಗಳನ್ನು ಹೊಂದಿರುತ್ತದೆ. ಟೆಂಡರ್‌ದಾರರು ಟೆಂಡರ್‌ಗಳನ್ನು ಎರಡು ಪ್ರತ್ಯೇಕ ಲಕೋಟೆಗಳಲ್ಲಿ, ಮೊಹರಾದ ಲಕೋಟೆಯ ಮೇಲೆ ಲಕೋಟೆ-ಎ ಟೆಕ್ನಿಕಲ್ ಬಿಡ್, ಲಕೋಟೆ- ಬಿ ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಪ್ರತ್ಯೇಕವಾದ ಎರಡು ಲಕೋಟೆಗಳನ್ನು ಮತ್ತೊಂದು ಲಕೋಟೆಯಲ್ಲಿ ಹಾಕಿ ಟೆಕ್ನಿಕಲ್ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಟೆಂಡರ್ ಸಲ್ಲಿಸತಕ್ಕದ್ದು.
12. ಲಕೋಟೆ-ಎ: ಟೆಕ್ನಿಕಲ್ ಬಿಡ್ ದ್ವಿಪ್ರತಿಗಳಲ್ಲಿ ಗುತ್ತಿಗೆದಾರರ ಬಳಿ ಇರುವ ತಾಂತ್ರಿಕ ಮಾಹಿತಿಗಳನ್ನು ಹೊಂದಿದ್ದು ಅವುಗಳಿಗೆ ವಿವರಗಳನ್ನು ನಿಗದಿತ ರೀತಿಯಲ್ಲಿ ಸಲ್ಲಿಸಬೇಕು. ಹಾಗೂ ಕಾಮಗಾರಿಗಳಿಗೆ ಅವಶ್ಯಕವಾದ ಮೊತ್ತದ ಇ.ಎಂ.ಡಿಯನ್ನು ನಿಗಧಿತ ರೀತಿಯಲ್ಲಿ ಮುಖ್ಯಾಧಿಕಾರಿಗಳು,ಪಟ್ಟಣ ಪಂಚಾಯಿತಿ ,ಸೊರಬರವರ ಕೃಪೆಯಲ್ಲಿ ಒತ್ತೆಯಾಗಿಡಬೇಕು.
13. ಲಕೋಟೆ-ಬಿ :ಫೈನಾನಿಯಲ್ ಬಿಡ್ ಟೆಂಡರ್ ಶೆಡ್ಯೂಲನ್ನು ದ್ವಿ ಪ್ರತಿಯಲ್ಲಿ ಹೊಂದಿದ್ದು ಪ್ರತಿ ಐಟಂಗಳಿಗೆ ದರವನ್ನು ಅಂಕೆಯಲ್ಲಿ ಮತ್ತು ಅಕ್ಷರಗಳಲ್ಲಿ ಸಲ್ಲಿಸಬೇಕು.

14. ಲಕೋಟೆ-ಎ ಟೆಕ್ನಿಕಲ್ ಬಿಡ್ ಮೊದಲು ತೆರೆಯಲಾಗುವುದು. ಹಾಗೂ ಗುತ್ತಿಗೆದಾರರು ಇದರಲ್ಲಿ ಒದಗಿಸಿರುವ ವಿವರಗಳನ್ನು ಪರಿಶೀಲಿಸಲಾಗುವುದು. ಇದರಲ್ಲಿ ಅರ್ಹತೆ ಪಡೆಯುವ ಗುತ್ತಿಗೆದಾರರ ಲಕೋಟೆ-ಬಿ ಫೈನಾನ್ಸಿಯಲ್ ಬಿಡ್‌ನ್ನು ತೆರೆಯಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಗಳ ನಿರ್ದಾರವು ಅಂತಿಮವಾಗಿರುತ್ತದೆ.
15. ಟೆಂಡರ್ ದಾರರು ವ್ಯಾಟ್ ನೊಂದಾಯಿಸಿದ ಪ್ರತಿ ಹಾಗೂ ಕಳೆದ ಸಾಲಿನವರೆಗೆ ವಾಣಿಜ್ಯ ತೆರಿಗೆ ಪಾವತಿಸಿರುವ ಬಗ್ಗೆ ತೀರುವಳಿ ಪತ್ರ ಹಾಗೂ ಟೆಂಡರ್ ಪುಸ್ತಕದಲ್ಲಿ ನಮೂದಿಸಿದ ಪೈನಾನ್ಸಿಯಲ್ ಟರ್ನ್‌ಓವರ್ ಹೊಂದಿರಬೇಕು.
16. ಟೆಂಡರ್ ಸಲ್ಲಿಸುವವರು ಟೆಂಡರ್‌ನಲ್ಲಿನ ಅಗತ್ಯ ನಿಭಂದನೆಗಳನ್ನು ಪೂರೈಸಲು ಬೇಕಾದ ಲಗತ್ತುಗಳನ್ನು ಟೆಂಡರ್ ಪುಸ್ತಕದೊಂದಿಗೆ ಲಗತ್ತಿಸುವುದು.ಕಟ್ಟಡ ಕಾಮಗಾರಿಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳಾದ ಕಾಂಕ್ರೀಟ್ ಮಿಕ್ಸರ್, ವೈಬರೇಟರ್, ಪಿನ್ ನೀಡಲ್ಸ್ ಮತ್ತು ಪ್ಲಾಟ್ ನೀಡಲ್ಸ್ ಇತ್ಯಾದಿ ಯಂತ್ರೋಪಕರಣಗಳನ್ನು ಹೊಂದಿರುವ ಬಗ್ಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಡೀಕರಣ ಪಡೆದು ಟೆಂಡರ್ ಜೊತೆ ಸಲ್ಲಿಸುವುದು.
17. ಟೆಂಡರ್ ದಾಸ್ತುವೇಜು ನಮೂನೆ k/w-4ನಲ್ಲಿ ತಿಳಿಸಿರುವ ನಿಬಂದನೆಗೆ ಒಳಪಟ್ಟು ಟೆಂಡರ್ ಸಲ್ಲಿಸುವುದು.
18. ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ಹಾಗೂ ವೆಬ್ ಸೈಟ್ (http://www.sorabatown.gov.in) ನಲ್ಲಿ ಪಡೆಯಬಹುದು.

| | |
|---|---|
| ಸಹಿ/- | ಸಹಿ/- |
| ಶ್ರೀ ಮಂಚಿ ಸೋಮಪ್ಪ | ಶ್ರೀ.ಕೆ.ನರಸಿಂಹಮೂರ್ತಿ |
| ಅಧ್ಯಕ್ಷರು | ಮುಖ್ಯಾಧಿಕಾರಿ, |
| . ಪಟ್ಟಣ ಪಂಚಾಯಿತಿ,ಸೊರಬ. | ಪಟ್ಟಣ ಪಂಚಾಯಿತಿ,ಸೊರಬ. |